**ಪ್ರಧಾನ ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಸುಳ್ಯ, ದ.ಕ. ಇವರ ನ್ಯಾಯಾಲಯದಲ್ಲಿ –**

**ಸಿ.ಸಿ.ನಂ. 36/2023**
**ಸಿ.ಡಬ್ಲ್ಯೂ–8**
**ಪಿ.ಡಬ್ಲೂ –7**

| | | |
|---|---|---|
| ಸಾಕ್ಷಿದಾರರ ಹೆಸರು | : | ರುಕ್ಮ ನ್ಯಾಕ |
| ತಂದೆಯ ಹೆಸರು | : | ಕುಂಡ ನ್ಯಾಕ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ನಿವೃತ್ತ ಪಿ.ಎಸ್.ಐ. |
| ವಾಸ | : | ಪುತ್ತೂರು. |
| ದಿನಾಂಕ | : | 16–12–2025. |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

## ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಾನು ದಿನಾಂಕ 09–04–2022 ರಿಂದ ದಿನಾಂಕ 17–08–2022 ರವರೆಗೆ ಬೆಳ್ಳಾರೆ ಪೊಲೀಸ್ ಠಾಣೆಯಲ್ಲಿ ಪಿ.ಎಸಡ್.ಐ. ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿನಾಂಕ 26–07–2022 ರಂದು ಈ ಪ್ರಕರಣದ ಕಡತವನ್ನು ಚಾ.ಸಾ.7 ರವರಿಂದ ಪಡೆದುಕೊಂಡು, ಪರಿಶೀಲಿಸಿ ನಂತರ ತಕ್ಷೀರು ಸ್ಥಳಕ್ಕೆ ಭೇಟಿ ನೀಡಿದಾಗ, ಅಲ್ಲಿ ಚಾ.ಸಾ.1 ರವರು ಚಾ.ಸಾ.3 ಹಾಗೂ ಚಾ.ಸಾ.4 ರವರೊಂದಿಗೆ ಹಾಜರಿದ್ದು, ಚಾ.ಸಾ.1 ರವರು ಘಟನಾ ಸ್ಥಳವನ್ನು ಇದುವೇ ಎಂದು ತೋರಿಸಿಕೊಟ್ಟದ್ದನ್ನು ನಾವು ಪರಿಶೀಲಿಸಿ, ಪಂಚರಿಗೆ ಪೊಲೀಸ್ ನೋಟೀಸನ್ನು ಜ್ಯಾರಿ ಮಾಡಿ, ಪಂಚರ ಸಮಕ್ಷಮ ತಕ್ಷೀರು ಸ್ಥಳವನ್ನು ಪರಿಶೀಲಿಸಿ, ಬೆಳಗ್ಗೆ 10.00–

ಸಾಕ್ಷಿಯ ಸಹಿ                ನ್ಯಾಯಾಧೀಶರ ಸಹಿ

11.00 ಗಂಟೆಯವರೆಗೆ ಸದರಿ ಸ್ಥಳದಲ್ಲಿ ಮಹಜರು ಹಾಗೂ ನಕಾಶೆಯನ್ನು ತಯಾರಿಸಿರುತ್ತೇನೆ.

ನಂತರ ನಮ್ಮ ಠಾಣೆಗೆ ಬಂದು, ಚಾ.ಸಾ.1 ರವರನ್ನು ಠಾಣೆಗೆ ಕರೆಸಿ, ವಿಚಾರಿಸಿ, ಚಾ.ಸಾ.1 ರವರ ಮರುಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಚಾ.ಸಾ.2 ಹಾಗೂ 3 ರವರನ್ನು ನಮ್ಮ ಠಾಣೆಗೆ ಕರೆಸಿ , ಅವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

ನಾನು ವರ್ಗಾವಣೆಗೊಂಡಿದ್ದರಿಂದ ದಿನಾಂಕ 17-08-2022 ರಂದು ಈ ಪ್ರಕರಣದ ಕಡತವನ್ನು ಚಾ.ಸಾ.9 ರವರಿಗೆ ಹಸ್ತಾಂತರಿಸಿರುತ್ತೇನೆ.

ನಾನು ಈಗ ನ್ಯಾಯಾಲಯದಲ್ಲಿ ಪಂಚರಿಗೆ ಕಳುಹಿಸಿದ ನೋಟೀಸನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-7 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಾನು ನೋಡಿ ಒಪ್ಪಿ ಗುರುತಿಸಿದ್ದು, ಅದನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

ನಾನು ಈಗ ನ್ಯಾಯಾಲಯದಲ್ಲಿ ತಕ್ಷೀರು ಸ್ಥಳದ ಮಹಜರು ಹಾಗೂ ಕರಡು ನಕಾಶೆಯನ್ನು ನೋಡುತ್ತಿದ್ದು, ಅವುಗಳನ್ನು ಈಗಾಗಲೇ ನಿಪಿ-2 ಹಾಗೂ ನಿಪಿ-3 ಎಂದು ನಿಶಾನಿಕರಿಸಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಾನು ನೋಡಿ ಒಪ್ಪಿ ಗುರುತಿಸಿದ್ದು, ಅವುಗಳನ್ನು ನಿಪಿ-2(ಡಿ) ಹಾಗೂ ನಿಪಿ-3(ಡಿ) ಎಂದು ಗುರುತಿಸಲಾಯಿತು.

ನಾನು ಚಾ.ಸಾ.3 ರವರ ಹೇಳಿಕೆಯನ್ನು ನಿಪಿ-4 ರಂತೆ ಪಡೆದುಕೊಂಡಿರುತ್ತೇನೆ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

**ಪಾಟೀ ಸವಾಲುಃ 1 ಹಾಗೂ 2ನೇ ಆರೋಪಿಗಳ ಪರ ಶ್ರೀ ಎಸ್.ಡಿ.ಎ. ವಕೀಲರಿಂದಃ**

ಚಾ.ಸಾ.1 ರವರು ನಮ್ಮ ಠಾಣೆಗೆ ಖುದ್ದಾಗಿ ಬಂದು ಪಿರ್ಯಾದಿಯನ್ನು ನೀಡಿರುವುದಿಲ್ಲ. ಅಂಚೆ ಮೂಲಕ ಪಿರ್ಯಾದಿಯನ್ನು ನೀಡಿರುತ್ತಾರೆ. ಯಾವ ಉದ್ದೇಶಕ್ಕೆ ಚಾ.ಸಾ.1 ರವರು ಅಂಚೆ ಮೂಲಕ ಪಿರ್ಯಾದಿಯನ್ನು ನೀಡಿರುತ್ತಾರೆಂದು ನಾನು ತನಿಖೆಯನ್ನು ಮಾಡಿರುವುದಿಲ್ಲ. ಚಾ.ಸಾ.1 ರವರಿಂದ ಅಂಚೆ ಮೂಲಕ ಪಿರ್ಯಾದಿಯು ನಮ್ಮ ಠಾಣೆಗೆ ಬಂದ ನಂತರ, ಚಾ.ಸಾ.1 ಹಾಗೂ ಆರೋಪಿಗಳನ್ನು ನಾವು ಠಾಣೆಗೆ ಕರೆಯಿಸಿ ವಿಚಾರಿಸಿದ್ದೀರಾ ಎಂದರೆ ಸಾಕ್ಷಿಯು ಚಾ.ಸಾ.1 ರವರನ್ನು ನಮ್ಮ ಠಾಣೆಗೆ ಕರೆಸಿ ಅವರ ಮರುಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಆರೋಪಿಯನ್ನು ನಮ್ಮ ಠಾಣೆಗೆ ಕರೆಸಿರುವುದಿಲ್ಲ.

ಚಾ.ಸಾ.1 ಹಾಗೂ ಆರೋಪಿಗಳ ನಡುವೆ ರಸ್ತೆಯ ಸಲುವಾಗಿ ತಕರಾರು ಇತ್ತು ಎಂದರೆ ಸರಿ. ಆ ಕಾರಣಕ್ಕಾಗಿ 1 ಹಾಗೂ 2ನೇ ಆರೋಪಿಗಳು ಮತ್ತು ಪಿರ್ಯಾದಿದಾರರು ಒಬ್ಬರಿಗೊಬ್ಬರು ಆಗಾಗ್ಗೆ ದೂರನ್ನು ಸಲ್ಲಿಸುತ್ತಾ ಇರುತ್ತಾರೆ ಎಂದರೆ ಸಾಕ್ಷಿಯು ನಾನು ಬೆಳ್ಳಾರೆ ಠಾಣೆಯಲ್ಲಿ ಕರ್ತವ್ಯದಲ್ಲಿದ್ದ ಸಮಯ ಅಂತಹ ಯಾವುದೇ ದೂರುಗಳು ಬಂದಿರುವುದಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

1ನೇ ಆರೋಪಿಯು ಪಿರ್ಯಾದಿದಾರರ ವಿರುದ್ಧವಾಗಿ ನೀಡಿದ ದೂರಿನ ಬಗ್ಗೆ ನಮ್ಮ ಠಾಣೆಯಿಂದ ಹಿಂಬರಹಗಳನ್ನು ನೀಡಿದ್ದು, ಸದರಿ ಎರಡು ಹಿಂಬರಹಗಳನ್ನು ಹಾಗೂ ಒಂದು ಸ್ವೀಕೃತಿಯನ್ನು ನಾನು ಈಗ ನೋಡಿ ಗುರುತಿಸಿದ್ದು, ಅವುಗಳನ್ನು **ನಿಡಿ-1 ರಿಂದ ನಿಡಿ-3** ಎಂದು ಗುರುತಿಸಲಾಯಿತು.

ಆರೋಪಿಗಳ ಮನೆಗೆ ಹೋಗುವ ರಸ್ತೆಯನ್ನು ಪಿರ್ಯಾದಿದಾರರು ತಡೆಹಿಡಿದು, ಪಿರ್ಯಾದಿದಾರರು ಸದರಿ ರಸ್ತೆಯಲ್ಲಿ ಅಡಿಕೆ ಮರದ ಗುಂಡಿಯನ್ನು ತೆಗೆದು, ಪುತ್ತೂರು ತಹಶೀಲ್ದಾರರ ಮೂಲಕ ಸದರಿ ಅಡಿಕೆ ಮರದ ಗುಂಡಿಯನ್ನು ತೆರವುಗೊಳಿಸಿರುತ್ತಾರೆ ಎಂದರೆ ಸಾಕ್ಷಿಯು ನಾನು ಕರ್ತವ್ಯದಲ್ಲಿದ್ದ ಸಮಯ ಆ ರೀತಿ ತೆರವುಗೊಳಿಸಿರುವುದಿಲ್ಲ ಎಂದು ನುಡಿಯುತ್ತಾರೆ.

ತಕ್ಷೀರು ನಡೆಯಿತು ಎನ್ನುವ ಸ್ಥಳಕ್ಕೆ ದಿನಾಂಕ 26-07-2022 ರಂದು ನಾನು ನನ್ನ ಮೂವರು ಸಿಬ್ಬಂದಿಯವರೊಂದಿಗೆ ಮಹಜರು ಕ್ರಮಕ್ಕಾಗಿ ಹೋಗಿರುತ್ತೇನೆ. ಸದರಿ ಸಿಬ್ಬಂದಿಯವರನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರಾಗಿ ಮಾಡಿರುವುದಿಲ್ಲ.

ಪಿರ್ಯಾದಿದಾರರು ಅಂಚೆ ಮೂಲಕ ಕಳುಹಿಸಿದ ಅಂಚೆಯು ದಿನಾಂಕ 25-08-2022 ರಂದು ನಮ್ಮ ಠಾಣೆಗೆ ಬಂದಿರುತ್ತದೆ. ದಿನಾಂಕ 21-07-2022 ರಂದು ಈ ಪ್ರಕರಣದ ತಕ್ಷೀರು ಕೃತ್ಯವು ನಡೆದಿರುತ್ತದೆ. ತಕ್ಷೀರು ನಡೆಯಿತು ಎನ್ನುವ ಸ್ಥಳಕ್ಕೆ ನಾವು ಹೋದಾಗ, ನಾವು ಮಹಜರು ಸಾಕ್ಷಿದಾರರನ್ನು ಸ್ಥಳಕ್ಕೆ ಕರೆದುಕೊಂಡು

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಹೋಗಿರುವುದಿಲ್ಲ. ನಾವು ತಕ್ಷೀರು ನಡೆಯಿತು ಎನ್ನುವ ಸ್ಥಳಕ್ಕೆ ಹೋದಾಗ ಮಹಜರು ಸಾಕ್ಷಿದಾರರು ಅಲ್ಲಿ ಹಾಜರಿದ್ದರು.

ತಕ್ಷೀರು ನಡೆಯಿತು ಎನ್ನುವ ಸ್ಥಳದಲ್ಲಿ ಯಾವುದೇ ಮಾರಕಾಸ್ತ್ರಗಳು ಇರಲಿಲ್ಲ. ಕೃತ್ಯ ನಡೆದ ಬಗ್ಗೆ ತಕ್ಷೀರು ನಡೆಯಿತು ಎನ್ನುವ ಸ್ಥಳದಲ್ಲಿ ಯಾವುದೇ ಕುರುಹುಗಳು ಇತ್ತೇ ಎಂದರೆ ಸಾಕ್ಷಿಯು ಮನೆಯ ಬಾಗಿಲಿನ ಮಧ್ಯಭಾಗದಲ್ಲಿ ಕಾಲಿನ ಅಚ್ಚು ಇತ್ತು ಎಂದು ನುಡಿಯುತ್ತಾರೆ. ತಕ್ಷೀರು ನಡೆಯಿತು ಎನ್ನುವ ಸ್ಥಳದಲ್ಲಿರುವ ಮನೆಯ ಮುಂಬಾಗಿಲು ಒಂದೇ ಬಾಗಿಲು ಆಗಿತ್ತು. ಸದರಿ ಕಾಲಿನ ಅಚ್ಚು ಯಾರದ್ದು ಎಂದು ನಿಮಗೆ ನಿಖರವಾಗಿ ತಿಳಿದಿತ್ತಾ ಎಂದರೆ ಸಾಕ್ಷಿಯು ಸದರಿ ಕಾಲಿನ ಅಚ್ಚು 3ನೇ ಆರೋಪಿಯದ್ದು ಎಂದು ಚಾ.ಸಾ.1 ರವರು ನಮ್ಮಲ್ಲಿ ಹೇಳಿರುತ್ತಾರೆ. ಸದರಿ ಮುಂಬಾಗಿಲು ಅಂದಾಜು ಆರೂವರೆ ಫೀಟು ಉದ್ದ ಇತ್ತು. ಸದರಿ ವಿಚಾರವನ್ನು ಮಹಜರಿನಲ್ಲಿ ನಾವು ನಮೂದಿಸಿರುತ್ತೇವೆ, ಆದರೆ ಬಾಗಿಲಿನ ಉದ್ದಳತೆಯನ್ನು ಮಹಜರಿನಲ್ಲಿ ನಮೂದಿಸಿರುವುದಿಲ್ಲ.

ಮಹಜರನ್ನು ನಾನೇ ಬರೆದಿರುತ್ತೇನೆ. ಮಹಜರಿನ ಪ್ರತೀ ಪುಟಗಳಿಗೆ ಸಾಕ್ಷಿದಾರರ ಸಹಿಗಳನ್ನು ಪಡೆದುಕೊಂಡಿರುವುದಿಲ್ಲ. ಮಹಜರಿನ ಪ್ರತೀ ಪುಟಗಳಿಗೆ ಸಾಕ್ಷಿದಾರರ ಸಹಿಗಳನ್ನು ಪಡೆದುಕೊಳ್ಳಲು ನನಗೆ ಯಾವುದೇ ತೊಂದರೆ ಇರಲಿಲ್ಲ.

ಸಾಕ್ಷಿದಾರರನ್ನು ನಮ್ಮ ಠಾಣೆಗೆ ನಾವು ಕರೆಸಿರುತ್ತೇವೆ. ಸಾಕ್ಷಿದಾರರ ಹೇಳಿಕೆಗಳನ್ನು ನಾನು ನಮ್ಮ ಠಾಣೆಯಲ್ಲಿ ಪಡೆದುಕೊಂಡಿರುತ್ತೇನೆ. ಸಾಕ್ಷಿದಾರರು ನಮ್ಮ

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಠಾಣೆಗೆ ಮಧ್ಯಾಹ್ನದ ನಂತರ ಬಂದಿದ್ದು, ನಿಖರವಾದ ಸಮಯ ನನಗೆ ಈಗ ನೆನಪಿರುವುದಿಲ್ಲ. ಆ ಸಮಯದಲ್ಲಿ ಚಾ.ಸಾ.1 ಹಾಗೂ ಚಾ.ಸಾ.2 ರವರು ನಮ್ಮ ಠಾಣೆಗೆ ಬಂದಿದ್ದು, ಅವರುಗಳು ಜೊತೆಯಾಗಿ ನಮ್ಮ ಠಾಣೆಗೆ ಬಂದಿರುವುದಿಲ್ಲ. ಆರೋಪಿಗಳ ಹಾಗೂ ಚಾ.ಸಾ.1 ರವರ ಮನೆಯು ಅಂದಾಜು ಸ್ವಲ್ಪ ದೂರದಲ್ಲಿಯೇ ಇರುತ್ತದೆ. ಒಬ್ಬರ ಮನೆಯಿಂದ ಇನ್ನೊಬ್ಬರ ಮನೆಯು ಕಾಣುತ್ತದೆ. 1 ಹಾಗೂ 2ನೇ ಆರೋಪಿಗಳ ಮನೆಯನ್ನು ಸಂಪರ್ಕಿಸುವ ರಸ್ತೆಯು ಚಾ.ಸಾ.1 ರವರ ಮನೆಯ ಪಕ್ಕದಲ್ಲಿಯೇ ಹಾದುಹೋಗುತ್ತದೆ ಎಂದರೆ ಸರಿ.

ನಾನು ತಕ್ಷೀರು ನಡೆಯಿತು ಎನ್ನುವ ಸ್ಥಳಕ್ಕೆ ಹೋದದ್ದೂ ಇಲ್ಲ, ಅಲ್ಲಿ ಮಹಜರು ಹಾಗೂ ಕರಡು ನಕಾಶೆಯನ್ನು ಜರಗಿಸಿದ್ದೂ ಇಲ್ಲ ಎಂದರೆ ಸರಿಯಲ್ಲ. ನಾನು ಠಾಣೆಯಲ್ಲಿ ಮಹಜರು ದಾಖಲೆಯನ್ನು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಮಹಜರಿಗೆ ನಾನು ಸಹಿಗಳನ್ನು ಠಾಣೆಯಲ್ಲಿ ಪಡೆದುಕೊಂಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. 1 ಹಾಗೂ 2ನೇ ಆರೋಪಿಗಳ ಸಿವಿಲ್ ವ್ಯಾಜ್ಯದ ಬಗ್ಗೆ ಪ್ರತೀಕಾರವಾಗಿ 1 ಹಾಗೂ 2ನೇ ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

**ಪಾಟೀ ಸವಾಲುಃ 3 ಹಾಗೂ 5 ನೇ ಆರೋಪಿಗಳ ಪರ ಶ್ರೀ ಜೆ.ಕೆ.ಬಿ. ವಕೀಲರಿಂದಃ**

ತಕ್ಷೀರು ನಡೆಯಿತು ಎನ್ನುವ ಸ್ಥಳದಲ್ಲಿರುವ ಮನೆಯ ಬಾಗಿಲಿನಲ್ಲಿರುವ ಕಾಲಿನ ಅಚ್ಚು ನಿಖರವಾಗಿ ಯಾರದ್ದು ಎಂದು ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿಯು ಚಾ.ಸಾ.1 ರವರು ನನ್ನಲ್ಲಿ ಹೇಳಿದ ಪ್ರಕಾರವಾಗಿ 3ನೇ ಆರೋಪಿಯ ಕಾಲಿನ ಅಚ್ಚು ಎಂದು ನಾನು ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಕಾಲಿನ ಅಚ್ಚು ಎಷ್ಟು ದಿನಗಳ ಪೂರ್ವದಲ್ಲಿ ಆಗಿರುತ್ತದೆ ಎಂಬ ಬಗ್ಗೆ ನಾನು ಪ್ರತ್ಯೇಕವಾಗಿ ತನಿಖೆಯನ್ನು ಮಾಡಿರುವುದಿಲ್ಲ. ನಾನು ಅಂಕಿ–ಅಂಶ ಭರ್ತಿಗೋಸ್ಕರ ಆರೋಪಿಗಳ ವಿರುದ್ಧ ನಾನು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆಂದರೆ ಸರಿಯಲ್ಲ. ಅಂತಹ ಯಾವುದೇ ಘಟನೆಯು ನಡೆದಿರುವುದಿಲ್ಲ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ 4 ಹಾಗೂ 6 ನೇ ಆರೋಪಿಗಳ ಪರ ಶ್ರೀ ಎಸ್.ಕೆ.ಬಿ. ವಕೀಲರಿಂದಃ**

1 ,2, 3 ಹಾಗೂ 5ನೇ ಆರೋಪಿಗಳ ಪರ ಶ್ರೀ ಎಸ್.ಡಿ.ಎ. ಹಾಗೂ ಶ್ರೀ ಜೆ.ಕೆ.ಬಿ. ವಕೀಲರು ಮಾಡಿದ ಪಾಟೀ ಸವಾಲನ್ನು 4 ಹಾಗೂ 6 ನೇ ಆರೋಪಿಗಳ ಪರ ಶ್ರೀ ಎಸ್.ಕೆ.ಬಿ. ವಕೀಲರು ಅಳವಡಿಸಿಕೊಳ್ಳಲು ಕೋರಿಕೊಂಡ ಮೇರೆಗೆ ಅನುಮತಿಸಲಾಯಿತು ಹಾಗೂ ಅಳವಡಿಸಿಕೊಳ್ಳಲಾಯಿತು.

**ಮರು ವಿಚಾರಣೆಃ** ಇಲ್ಲ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿರುತ್ತಾರೆ.

ಸಾಕ್ಷಿಯ ಸಹಿ

ಪ್ರಧಾನ ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾಯಿಕ ದಂಡಾಧಿಕಾರಿಯವರು, ಸುಳ್ಯ, ದ.ಕ.

ಸಾಕ್ಷಿಯ ಸಹಿ

ನ್ಯಾಯಾಧೀಶರ ಸಹಿ